ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) 49 ಕಿ.ಮೀ. ಇರುತ್ತದೆ.

ಆ) 56 ಕಿ.ಮೀ. ಇರುತ್ತದೆ.

ಇ) 52 ಕಿ.ಮೀ. ಇರುತ್ತದೆ.

ಈ) ಈ ರಸ್ತೆಯು ಹೊಸದಾಗಿ ನಿರ್ಮಿತವಾಗಿದ್ದು. ಈ ಮೇಲಿನ ಮಾರ್ಗಗಳಲ್ಲಿ ಅಂತರ ಕ್ರಮವಾಗಿ 7.ಕಿ.ಮೀ. ಆಗಿದೆ.

ಉ) ಈ ಮಾರ್ಗಗಳಲ್ಲಿ ಪ್ರಯಾಣಿಕರ ಸಾಂದ್ರತೆಯನುಸಾರ ಬಸ್ ಆಚರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

512 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿ ರಾಜ್ಯ ಸಾರಿಗೆ ಸಂಸ್ಥೆಯವರು ಸ್ಕ್ಯಾಪ್ ಆದ ಮತ್ತು ಅತೀ ಹಳೆಯ ವಾಹನಗಳನ್ನು ಓಡಿಸುತ್ತಿರುವ ಸಂಗತಿ ನಿಜವೇ?

ಆ) ಈ ಹಳೆಯ ಹಾಗೂ ಸ್ಕ್ಯಾಪ್ ಆದ ವಾಹನಗಳನ್ನು ಓಡಿಸುತ್ತಿರುವುದರಿಂದ ಅಪಘಾತಗಳು ಸಂಭವಿಸುತ್ತಿರುವುದು ನಿಜವೇ?

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಘಟಕದ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಸ್ಕ್ಯಾಪ್ ಆಗುವ ಸ್ಥಿತಿಯಲ್ಲಿದ್ದ ವಾಹನಗಳು ಅತೀ ಹೆಚ್ಚಾಗಿ ಇದ್ದು ಆ ವಾಹನಗಳು ರಸ್ತೆಯ ಮೇಲೆ ಕೆಟ್ಟು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಶಾರ್ಟ್ ರೂಟ್‌ಗಳಿಗೆ ಓಡಿಸುವ ವಾಹನಗಳು ಹಳೆಯ ಹಾಗೂ ರಿಪೇರಿಯಲ್ಲಿ ಇರುವಂತಹ ವಾಹನಗಳಾಗಿದ್ದು, ಅವು ಮಾರ್ಗ ಮಧ್ಯದಲ್ಲಿ ಕೆಟ್ಟು ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಇಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಸಾರಿಗೆ ಸಂಸ್ಥೆಯು ಬೆಳಗಾವಿ ಮತ್ತು ಚಿಕ್ಕೋಡಿ ವಿಭಾಗಗಳಿಗೆ ಸೇರಿ ಪ್ರಸಕ್ತ ಸಾಲಿನಲ್ಲಿ ಒಟ್ಟು 117 ಹೊಸ ವಾಹನಗಳನ್ನು ನೀಡಲಾಗಿದೆ. ಜಾರಿಯಲ್ಲಿರುವ

ಸಂಸ್ಥೆಯ ನಿಯಮಗಳ ಮೇರೆಗೆ 7.5 ಲಕ್ಷ ಕಿ.ಮೀ.ಗಳನ್ನು ಕ್ರಮಿಸುವ ಹಾಗೂ ದುಸ್ಥಿತಿಯಲ್ಲಿರುವ ವಾಹನಗಳನ್ನು ಗುರುತಿಸಿ ಪ್ರತಿವರ್ಷ ರದ್ಧತಿಯೋಜನೆಯನ್ನು ತಯಾರಿಸಲಾಗುತ್ತಿದ್ದು, ಸದರಿ ಯೋಜನೆಯ ಮೇರೆಗೆ ವಾಹನಗಳನ್ನು ರದ್ಧತಿಗೊಳಪಡಿಸಿ ಅವುಗಳ ಸ್ಥಾನದಲ್ಲಿ ಹೊಸ ವಾಹನವನ್ನು ನೀಡಲಾಗುತ್ತಿದೆ. ಸದರಿ ರದ್ಧತಿ ಯೋಜನೆಯ ಮೇರೆಗೆ ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗಗಳಿಗೆ ಸೇರಿದ ಒಟ್ಟು 346 ವಾಹನಗಳನ್ನು ನಿಷ್ಕ್ರಿಯಗೊಳಿಸಿ ಅವುಗಳ ಸ್ಥಾನದಲ್ಲಿ 346 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲಾಗಿದೆ ಆದುದರಿಂದ ಸ್ಕ್ರ್ಯಾಪ್ ವಾಹನಗಳನ್ನು ಓಡಿಸಿ ಅಪಘಾತಗಳು ಸಂಭವಿಸುವ ಪ್ರಮೇಯವು ಉದ್ಭವಿಸುವುದಿಲ್ಲ.

ಇ) ಇಲ್ಲ. ಮೇಲೆ ವಿವರಿಸಿದಂತೆ ರದ್ಧತಿ ಯೋಜನೆಯ ಮೇರೆಗೆ ಕಳೆದ ಸಾಲಿನಲ್ಲಿ ಬೈಲಹೊಂಗಲ ಘಟಕದ 14 ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಬೈಲಹೊಂಗಲ ಘಟಕದ 8 ವಾಹನಗಳನ್ನು ರದ್ಧತಿಗೊಳಪಡಿಸುವ ಯೋಜನೆ ಹೊಂದಿದ್ದು ಇದುವರೆಗೂ 9 ವಾಹನಗಳನ್ನು ರದ್ಧತಿಗೊಳಪಡಿಸಿ ಬದಲಾಯಿಸಲಾಗಿದೆ ಈಗ ಬೈಲಹೊಂಗಲ ಘಟಕದಲ್ಲಿ ರದ್ಧತಿಗೆ ನಿಗದಿಪಡಿಸಿದ ಕಿ.ಮೀ.ಗಳನ್ನು ಕ್ರಮಿಸಿದ ಯಾವುದೇ ವಾಹನಗಳು ಇರುವುದಿಲ್ಲ. ಇದಲ್ಲದೇ ವಾಹನಗಳ ದುರಸ್ತಿ ಮತ್ತು ನಿರ್ವಹಣಾ ವಿಧಾನಗಳ ಗುಣಮಟ್ಟವನ್ನು ಉತ್ತಮಪಡಿಸಿ, ವಾಹನಗಳು ರಸ್ತೆಯ ಮೇಲೆ ಕೆಟ್ಟು ನಿಲ್ಲದಂತೆ ಎಲ್ಲಾ ಮುಂಜಾಗರೂಕತಾ ಕ್ರಮಗಳನ್ನು ನಿರಂತರವಾಗಿ ತೆಗೆದುಕೊಳ್ಳಲಾಗುತ್ತಿದೆ.

ಈ) ಇಲ್ಲ. ಶಾರ್ಟ್ ರೂಟ್‌ಗಳಿಗೂ ಸಹ ಉತ್ತಮ ಹಾಗೂ ಸುಸ್ಥಿತಿಯಲ್ಲಿರುವ ರಸ್ತೆ ಯೋಗ್ಯ ವಾಹನಗಳನ್ನೇ ನೀಡಲಾಗುತ್ತಿದೆ. ಮೇಲೆ ವಿವರಿಸಿದಂತೆ, ಸಂಸ್ಥೆಯು ವಾಹನಗಳ ದುರಸ್ತಿ ನಿರ್ವಹಣೆಯ ಗುಣಮಟ್ಟವನ್ನು ಸುಧಾರಿಸಿ ಸುಸ್ಥಿತಿಯಲ್ಲಿರುವ ವಾಹನಗಳನ್ನೇ ಅನುಸೂಚಿ ಕಾರ್ಯಚರಣೆಗೆ ನೀಡಲಾಗುತ್ತಿದ್ದು, ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ರಾಜ್ಯ ಸಾರಿಗೆ ಬಸ್ಸುಗಳಿಗೆ ಟ್ರಾಯಲ್ ಇಲ್ಲದೆ ಸರ್ಟಿಫಿಕೇಟ್

513- Sri Kaujalagi Mahantesh (Bylahongala) : Will the Hon'ble Transport Minister pleased to state?

a) *Whether it has come to the notice of the Government that Certificate are issued without taking trails of State Transport Buses by R.T.C. Belgaum;*

b) *How many Transport Buses were checked by RTC Belgaum in the current year and last year (Details of checks of State Transport Buses to be furnished month wise);*

c) *Whether the provisions of M.V. Act applies to State Transport*